ಥಟ್ಟನೆ ಮಾತು ನಿಲ್ಲಿಸಿದಾಕೆ,
ಅಮ್ಮ, ನಿನಗೂ ಮದುವೆಯಾಗಿದೆ
ನೀನಗೇಕೆ ಹರಿದ ಸೀರೆ
ಯಾಕೆ ಕಣ್ಣೀರು
ಮತ್ತ್ಯಾಕೆ ಇಷ್ಟೊಂದು
ಕೆಲಸ!!...
ಬೆರಗುಗಣ್ಣಿಂದ ತನ್ನನ್ನೇ
ದಿಟ್ಟಿಸುತ್ತ ಕುಳಿತ
ಪುಟ್ಟ ಮಗಳತ್ತ
ಪ್ರೀತಿಯುಕ್ಕಿ ಬಂದು
ಕೆನ್ನೆಗೊಂದು
ಮುತ್ತಿಕ್ಕಿದಳು.

ಸಿಂಡರೆಲಾಳದು
ಬರಿಯ ಕಥೆ ಮಗಳೆ
ಕಟ್ಟುಕಥೆ...
ರಾಜಕುಮಾರನೊಟ್ಟಿಗಿನ
ಸಾವಿರ ವರ್ಷದ ಸುಖ
ಬರಿಯ ಭ್ರಮೆಯಷ್ಟೆ.
ಮದುವೆಯಾದ ಹೆಣ್ಣುಗಳೆಲ್ಲ
ಸುಖವಾಗಿರುವುದಿಲ್ಲ.
ಸುಖವಾಗಿದ್ದವರೆಲ್ಲಾ
ಮದುವೆಯಾಗದವರೂ ಅಲ್ಲ.
ಅಂದುಕೊಂಡಷ್ಟು ಸುಸೂತ್ರವಲ್ಲ.

ಎಲ್ಲವೂ, ಎಂದಿಗೂ
ಸರಿಯಾಗುವುದಿಲ್ಲ.

ಮಗಳ ಪಿಳಿ ಪಿಳಿ
ಕಣ್ಣು ನೋಡುತ್ತ
ಮತ್ತೊಮ್ಮೆ ನಕ್ಕಳು.

ಸುಖ ತುಂಬ ಚಿಕ್ಕದು
ಕ್ಷಣಿಕವೂ ಹೌದು.
ಹೊಟ್ಟೆ ತುಂಬ ಊಟ
ಪುಟ್ಟದೊಂದು ಮನೆ
ಒಂದಿಷ್ಟು ತಮಾಷೆ
ನಗುವಿನ ಗಲ ಗಲ ಸದ್ದು...
ಈ ಕ್ಷಣದ ಖುಷಿ
ಸವಿದುಬಿಡು.
ಬದುಕೆಂದರೆ
ರಾಜಕುಮಾರನೊಟ್ಟಿಗಿನ
ಅದ್ದೂರಿ ಮದುವೆಯೊಂದೇ ಅಲ್ಲ.
ಗಾಜಿನ ಬೂಟು ಹಾಕಿ
ನಡೆಯುವುದು
ಸುಲಭವೂ ಅಲ್ಲ.

ಏನೋ ಅರ್ಥವಾದಂತೆ
ಎದ್ದು ನಿಂತಳು ಮಗಳು.

ಅಮ್ಮಾ, ಆಟವಾಡಲು ಹೋಗಲೆ
ಎಂದವಳಿಗೆ,
ಕತ್ತಲಾಗುವದಕ್ಕೂ ಮುಂಚೆ
ಬಂದುಬಿಡು
ಝಾನ್ಸಿ ಮತ್ತೆ ಕಿತ್ತೂರಿನ
ರಾಣಿಯರ ಕಥೆ ಹೇಳುವೆ
ಎಂದಳು ಅಮ್ಮ.

ಚಿಟ್ಟೆಯಂತೆ ಕುಣಿಯುತ್ತ
ಹೋದವಳನ್ನೆ ನೋಡುತ್ತ
ಹಳೆ ಹಾಡೊಂದು ಗುನುಗುತ್ತ
ಹರಿದ ಸೀರೆ
ಹೊಲಿಯತೊಡಗಿದಳು.



● ವಿನಯಾ